ನಂಬರ್.	ಜಮ್ಮಾ ಇರತಕ್ಕ ಭಾಗ.	ಮಾಲೀಕರ ಹೆಸರುಗಳು.	ವಿಸ್ತೀರ್ಣ. ಪೈರ್ಮೈ ಖಿಲ್ಲಿ.	ವಿಸ್ತೀರ್ಣ. ಪೈರ್ಮೈ ಖಿಲ್ಲಿ.	ತಪಾಲು.	ಜಮ್ಮಾ ಬಗ್ಗೆ ಟೀಕಾ ಟಿಪ್ಪಣಿ.	ಚೌತಪ್ಪು.
9	ಮೋತೀಖಾನಾ ಬೀದಿ	ಮೂರ್ತೆಪ್ಪನ ಮಗ ನೃಸಿಂಹ ಮೂರ್ತಿ	48 48	30 31	ತಾರೀ ಮನೆಯ 3 ಅಂಕಣ ತಖ್ತಪೋಷ್ 21 ಅಂಕಣ ಹಂಚಿನ 2 ಅಂಕಣ ಬಂಜರ್ ಜಮ್ಮಾನು	ಚರಾಂಡೀನಲ್ಲಿ ಹಾಕುವ ಬಗ್ಗೆ	ಪೂರ್ವಕ್ಕೆ ಸಂದೀ, ದಕ್ಷಿಣಕ್ಕೆ ಮೋತೀಖಾನೆ ಬೀದಿ, ಪಶ್ಚಿಮಕ್ಕೆ ವೆಂಕಟಕೃಷ್ಣೀಅರಸನ ಮನೆ, ಉತ್ತರಕ್ಕೆ ಗರಳಪುರಿಶಾಸ್ತ್ರಿಗಳ ಮನೆ
10	ಡಿಟೋ	ಕಪನೀಪತಿ ಶಾಸ್ತ್ರಿ	26	66	ಹಂಚಿನ 16 ಅಂಕಣ ಡಿಟೋ ವಪ್ಪಾರ 2 ಅಂಕಣ 1 ಭಾವಿ	ಡಿಟೋ	ಪೂರ್ವಕ್ಕೆ ವೆಂಕಟಸುಬಯ್ಯನ ಮನೆ, ದಕ್ಷಿಣಕ್ಕೆ ಸುಬಣ್ಣನ ಮನೆ, ಪಶ್ಚಿಮಕ್ಕೆ ರಘುಪತಿ ಶಾಸ್ತ್ರಿಗಳ ಮನೆ, ಉತ್ತರಕ್ಕೆ ಮೋತೀಖಾನೆ ಬೀದಿ
11	ಡಿಟೋ	ಚಿಕ್ಕಲಿಂಗರಾಜೇ ಅರಸಿನವರು	22 20	33 20	ಹಂಚಿನ 9 ಅಂಕಣ ಜಮ್ಮಾನು	ಡಿಟೋ	ಪೂರ್ವಕ್ಕೆ ಸಂದೀ ದಕ್ಷಿಣಕ್ಕೆ ಮೋತೀಖಾನೆ ಬೀದಿ ಪಶ್ಚಿಮಕ್ಕೆ ಶಾಮರಾಯರ ಮನೆ, ಉತ್ತರಕ್ಕೆ ಮಾದಪ್ಪಶಾಸ್ತ್ರಿ ಮನೆ
12	ಡಿಟೋ	ಮಾದಪ್ಪ ಶಾಸ್ತ್ರಿ	18	22	ತಖ್ತಪೋಷ್ 5 ಅಂಕಣ ಹಂಚಿನ 2 ಅಂಕಣ	ಡಿಟೋ	ಪೂರ್ವಕ್ಕೆ ಸಂದೀ ದಕ್ಷಿಣಕ್ಕೆ ಲಿಂಗರಾಜೇ ಅರಸಿನವರ ಲಾಯ, ಪಶ್ಚಿಮಕ್ಕೆ ಶಾಮರಾಯ ಬಂಜರ್ ಜಮ್ಮಾನು, ಉತ್ತರಕ್ಕೆ ಸರಕಾರ್ ಜಮ್ಮಾನು
13	ವೀಣೇ ವೆಂಕಟಸುಬ್ಬಯ್ಯನವರ ಬೀದಿ	ಸುಬ್ಬಣ್ಣ	30	34	ತಾರೀ 7 ಅಂಕಣ ತಖ್ತಪೋಷ್ 12 ಅಂಕಣ ಹಂಚಿನದು 15 ಅಂಕಣ 1 ಭಾವಿ	ಡಿಟೋ	ಪೂರ್ವಕ್ಕೆ ಸಂದೀ, ದಕ್ಷಿಣಕ್ಕೆ ಸರಕಾರದ ಜಮ್ಮಾನು, ಪಶ್ಚಿಮಕ್ಕೆ ವೆಂಕಟರಮಣಯ್ಯನ ಮನೆ, ಉತ್ತರಕ್ಕೆ ವೀಣೇ ವೆಂಕಟಸುಬಯ್ಯನವರ ಗಲ್ಲಿ
14	ಡಿಟೋ	ಅಗರದ ಕೃಷ್ಣಪ್ಪನ ಹೆಂಡತಿ ಶಂಕರಮ್ಮ	43	20	ಜಮ್ಮಾನು 1 ಭಾವಿ	ಡಿಟೋ	ಪೂರ್ವಕ್ಕೆ ಸುಬ್ಬಯ್ಯನ ಮನೆ, ದಕ್ಷಿಣಕ್ಕೆ ವೆಂಕಟಸುಬಯ್ಯನ ಬೀದಿ, ಪಶ್ಚಿಮಕ್ಕೆ ರಾಮಶಾಸ್ತ್ರಿ ಮನೆ, ಉತ್ತರಕ್ಕೆ ವೆಂಕಟಶಾಸ್ತ್ರಿ ಮನೆ
15	ಮುನಿಯಾಜಟ್ಟಿಕೇರಿ	ವೆಂಕಟಶಾಸ್ತ್ರಿ	45	27	ತಖ್ತಪೋಷ್ 4 ಅಂಕಣ ಹಂಚಿನದು 8 ಅಂಕಣ ವಪ್ಪಾರ 3 ಅಂಕಣ	ಡಿಟೋ	ಪೂರ್ವಕ್ಕೆ ಚಿನ್ನಪ್ಪ ಜೋಯಿಸರಮನೆ, ದಕ್ಷಿಣಕ್ಕೆ ಶಂಕರಮ್ಮನ ಮನೆ, ಪಶ್ಚಿಮಕ್ಕೆ ಸುಬ್ಬರಾಯರ ಮನೆ, ಉತ್ತರಕ್ಕೆ ಮುನಿಯಾಜಟ್ಟಿ ಬೀದಿ.

ಬಿ.ಎಂ.ಜೀಬ್ ಹುಕ್ಕುಂ,
ಆರ್. ವಿಜಯಿಾಂದ್ರರಾವ್,
ಚೀಫ್ ಸೆಕ್ರಿಟೇರಿ.

ಮೈಸೂರು ದಿವಾನರವರ ಪ್ರೊಸಿಡಿಂಗ್ಸ್ ರೆವಿನ್ಯೂ ಇಲಾಖೆ.

ಆರ್ಡರ್ ನಂಬರ್ 3786—95—101 ಮತ್ತುಂ 1ನೇ ಸೆಪ್ಟಂಬರ್ 1887ನೇ ಇಸವಿ ಮೊಕ್ಕಾಂ ಬೆಂಗಳೂರು.

1887ನೇ ಇಸವಿ ಫಿಬ್ರವರೀ 11ನೇ ಮತ್ತುಂ 341ನೇ ನಂಬರು ಇನ್ಸ್ಟ್ರಾಕ್ಷನ್ನಿನಮೆಯಿಂದ ತಿದ್ದುಪಡಿ ಆದ ಪ್ರಕಾರ ಸರ್ವೆ ಗ್ಯಾರಂಟಿಯಾನೆ ಸರ್ವೆ ಕಾಲಿನ XVIIನೇ ನಿಬಂಧನೆ ಅನುಸರಿಸಿ ಇನ್ನೊಂ ಗ್ರಾಮಗಳಲ್ಲಿರತಕ್ಕ ತರೀ ಜಮ್ಮಾಗಳ ಸರ್ವೆ ಆಕಾರದ $\frac{1}{17}$ರ ಭಾಗವು "ಇರಿಗೇಷನ್‌ಸೆಸ್‌ಗೆ ಸಮನಾದ ಮೊಬಲಗು" ಯೆಂಬ ಹೆಸರಿಂದ ವಸೂಲ್ಮಾಡಲ್ಪಡುತ್ತಿದೆ. ಇನಾಂದಾರರು ಸಾಧಾರಣವಾಗಿ ಈ

ವಸೂಲಾತಿ ವಿಷಯದಲ್ಲಿ ಫಿರ್ಯಾದು ಮಾಡುವದಲ್ಲದೆ ಸದರೀ ಜಮೀನುಗಳಿಗೆ ಯಾವದೊಂದು ಸರ್ಕಾರಿ ಜಲಾಧಾರಗಳಿಂದಲೂ ಪಾಯಿದೆ ಇಲ್ಲವಾದದರಿಂದ ಈ ಬಾಬತು ಮೊಬಲಗು ವಸೂಲ್ ಮಾಡುವದು ಅನ್ಯಾಯವೆಂಬದಾಗಿ ವಾದಿಸುತ್ತಾರೆ. ಈ ಬಾಬತು ಫಿರ್ಯಾದು ಇ ನಾಂ ಕೆರೆಗಳಿಂದ ಮಾತ್ರವೇ ನೀರು ಹಾಯುವಂಥಾ ಇನಾಂ ತರೀ ಜಮೀನುಗಳುಳ್ಳ ಪೂರಾ ಗ್ರಾಮದ ಇನಾಂದಾರರುಗಳ ವಿಷಯದಲ್ಲಿ ನ್ಯಾಯವಾದುದೆಂಬದಾಗಿ ಶ್ರೀಮ್ ಮಹಾರಾಜಾ ಸರ್ಕಾರದವರು ಅಭಿಪ್ರಾಯ ಪಡುತ್ತಾರೆ. ಸರ್ಕಾರದವರು ಈ ಬಾಬತು ವಸೂ ಲಿಯನ್ನು ಮೋಕೂಫ್ ಮಾಡತಕ್ಕದ್ದೆಂದು ಆಜ್ಞಾಪಿಸುತ್ತಾರೆ. ಆದರೆ ಈ ನಜವಳಿತೆಯನ್ನು ಮಂಜೂರ್ಮಾಡುವದರಲ್ಲಿ ಗವರ್ಮೆಂಟಿನವ ರು ಸದರೀ ನತವಳಿತೆಯಿಂದ ಪಾಯಿದೆ ಪಡಿಯುವ ತಮಾಂ ಇನಾಂದಾರರಿಗೂ ತಿಳಿಸುವದೇನಂದರೆ ಸದರೀ ಇನಾಂದಾರರು ಅವರ ಕೆರೆಗ ಳಿಗೆ ಅವಶ್ಯಕವಾದಾಗ ರಿಪೇರಿ ಕೆಲಸಗಳನ್ನು ನಡಿಸುವದಕ್ಕೂ ಮತ್ತು ಅವುಗಳನ್ನು ಯಾವಾಗಲೂ ಕ್ರಮವಾದ ಸ್ಥಿತಿಯಲ್ಲಿಟ್ಟುಕೊಂಡಿ ರುವದಕ್ಕೂ ಖಂಡಿತವಾಗಿ ಜವಾಬ್‌ದಾರರಾಗಿರತಕ್ಕದ್ದು. ಅವರು ಈ ಕೆಲಸದಲ್ಲಿ ತಪ್ಪಿದರೆ ಅವಶ್ಯಕವಾದ ಕಾಮಗಾರಿಯು ಸರ್ಕಾರದಿಂದ ನಡಿಸಲ್ಪಟ್ಟು ಲಾಗವಡು ಇನಾಂದಾರರಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

2. ಮೇಲ್ಕಂಡ ಹುಕ್ಕುಂ ಅನುಸರಿಸಿ ಇದರಡೀಕಂಡ ಸೆಕ್ಷ್ಯಗಳು ಸರ್ವೇಕಾಲಿನ XVII ಮತ್ತು XVIIIನೇ ಸೆಕ್ಷನಿಗೆ ಬದಲಾಗಿ ಉಪಯೋಗಿಸಲ್ಪಡತಕ್ಕದ್ದು.

XVII. ಯಿರಿಗೇಷ್ಯ ಸೆಸ್ಸ್‌ಯಾನೆ ನೀರು ಸರದಿಯು ಸರ್ಕಾರ ಗ್ರಾಮದಲ್ಲಿಯಾಗಲಿ ಪೂರಾ ಇನಾಂ ಗ್ರಾಮದಲ್ಲಿಯಾಗಲ್ಲಿ ಇನಾಂ ತರೀಫ್ ಯಿರತಕ್ಕ ತಮಾಂ ತರೀ ಜಮೀನ್‌ಗಳ ಐಯಿಂದ ಕರಾವ್ ಆಗತಕ್ಕ ಸರ್ವೆ ಆಕಾರದಲ್ಲಿ ಬದಸ್ತೂರು ಕೇರಿಸಲ್ಪ ಡತಕ್ಕದ್ದು. ಮತ್ತು ಅಂಥಾ ಆಕಾರದ $\frac{1}{17}$ ರ ಭಾಗವು ಬದಸ್ತೂರು ಜೋಡೀಮೇಲೆ ಪರಂತು "ಯಿರಿಗೇಷ್ಯ ಸೆಸ್ಸ್‌ಗೆ ಸಮನಾದ ಮೊಬಲಗು" ಯಂಬ ಹೆಸರಿನಿಂದ ಮತ್ತು ಅಂಥಾ ಜಮೀನ್ ಯಾ ಗ್ರಾಮಗಳ ಮೇಲೆ ಅಲಾಹಿದಾ ವಸೂ ಲ್ ಮಾಡಲ್ಪಡಬೇಕಾದ ಕ್ವಿಟ್‌ರೆಂಟ್ ದೇಖೀಲ್ ವಸೂಲ್ಮಾಡಲ್ಪಡತಕ್ಕದ್ದಲ್ಲದೆ "ಡಿಸ್ಟ್ರಿಕ್ಟ್ಯಿರಿಗೇಷ್ಯ ಫಂಡ್" ಹೆಡ್ಡಿಗೆ ಲೆಕ್ಕದಲ್ಲಿ ಜಮಾ ಕಟ್ಟಲ್ಪಡತಕ್ಕದ್ದು; ಪರಂತು ಅಂಥಾ ತರೀ ಜಮೀನುಗಳು ಪೂರಾ ಇನಾಂ ಗ್ರಾಮಗಳಲ್ಲಿ ಯಿ ದ್ದು ಅಂಥಾ ಗ್ರಾಮದಲ್ಲೇ ಯಿರತಕ್ಕಂಥಾ ಕೆರೇ ಯಾ ಇತರ ಜಲಾಧಾರಗಳಿಂದ ಮಾತ್ರವೇ ನೀರು ವದಗಿಸಲ್ಪಟ್ಟರೆ ಅವುಗಳಿಗಾಗಿ ಯಾವ ನೀರು ಸರದಿಯಾಗಲಿ ಯಾ ಅದಕ್ಕೆ ಸಮಾನ ಮೊಬಲಾಗಲೀ ಸರ್ಕಾರಕ್ಕೆ ತೆರಬೇಕಾದ್ದಿಲ್ಲವು.

ಪರಂತು ಯಿರಿಗೇಷ್ಯ ಸೆಸ್ಸ್‌ಯಾನೆ ನೀರು ಸರದಿಯನ್ನು ಕರಾವ್ ಮಾಡುವದಕ್ಕೋಸ್ಕರ ಸರ್ವೇ ಇಲಾಖೆಯವ ರು, ಸರ್ಕಾರ ಜಲಾಧಾರಗಳಿಂದ ನೀರು ಹಾಯಿಸುವಂಥಾ ಇನಾಂ ಗ್ರಾಮಗಳಲ್ಲಿರತಕ್ಕ ಅಂಥಾ ತರೀ ಜಮೀನುಗಳ ಆಕಾರವನ್ನು ತಿಳಿದು ರೆಕಾರ್ಡು ಮಾಡತಕ್ಕದ್ದು, ಮತ್ತು ತಮಾಂ ಇನಾಂ ಯಾ ಇತರ ತರೀ ಜಮೀನುಗಳ ಸರ್ವೇ ಆಕಾರದಲ್ಲಿ ಅವುಗಳ ಮೇಲೆ ಕರಾವ್ ಮಾಡಲ್ಪಡಬಹುದಾದ ಯಾವದಾರೂ ಅಲಾಹಿದಾ ನೀರು ಸರದಿಯೂ ಅಪಗಿ ಯಿ ರತಕ್ಕದ್ದು.

XVIII. ಕಾಯಂಗುತ್ತಾ ಗ್ರಾಮಗಳಿಗೂ ಮತ್ತು (ಸರ್ವಮಾನ್ಯ ಯಾ ಜೋಡೀ) ಇನಾಂ ಗ್ರಾಮಗಳಿಗೂ ರೂಪಾಯಿ ವಂದಕ್ಕೆ ವಂದಾಣೆಯಂತೆ ಲೋಕಲ್ ಫಂಡ್ ಸೆಸ್ ವಸೂಲ್ಮಾಡಲ್ಪಡತಕ್ಕದ್ದು. ಕಾಯಂಗುತ್ತಾ ಗ್ರಾಮದ ವಿಷಯದಲ್ಲಿ ಕಾ ಯಂಗುತ್ತಾ ಮೊಬಲಗಿನ ಮೇಲೂ ಇನಾಂ ಗ್ರಾಮಗಳ ವಿಷಯದಲ್ಲಿ ಇನಾಂ ಗ್ರಾಮಗಳ ಆಕಾರದಮೇಲೂ ವಸೂ ಲ್ ಮಾಡಲ್ಪಡತಕ್ಕದ್ದು.

3. ಬದಸ್ತೂರು 1875ನೇ ಇಸವಿ ಮೇ 7ನೇ ಮಕ್ಕುಂ 72ನೇ ನಂಬರುಳ್ಳ ಮಾಜೀ ಚೀಫ್ ಕಮ್ಮಿಷನರವರ ಇಸ್ತಿಹಾರಿ ನೊಂದಿಗೆ ಪಾಯಿಷ್ ಮಾಡಲ್ಪಟ್ಟ ಡಿಸ್ಟ್ರಿಕ್ಟ್ ಯಿರಿಗೇಷ್ಯ ಸೆಸ್ಸ್ ಫಂಡಿನ ಆಡಳಿತವನ್ನು ನಡಿಸುವದರಲ್ಲಿ ಡಿಸ್ಟ್ರಿಕ್ಟ್ ಕಮ್ಮಿಟಿಗಳವರು ಅನುಸರಿಸತಕ್ಕ ಬಾಬ್ತೆ ವಿರ್ಪಡಿಸಿದ ನಿಬಂಧನೆಗಳ 6ನೇ ಕಲಮು ಈ ಕೆಳಗೆ ನಮೂದಾಗುವ ಮೇರಿಗೆ ತಿದ್ದುಪಾಡಾಗಿರತಕ್ಕದ್ದು.

VI. ಇನಾಂ ವ ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರು ತಮ್ಮ ತಮ್ಮ ಗ್ರಾಮದ ಕೆರೆಯ ನೀರಿನಿಂದಲೇ ನಾಗುವಳ್ಳೀ ಆಗುವ ತರೀ ಜಮೀನಿಗಾಗಿ ನೀರು ಸರದಿಯನ್ನು ತೆರಬೇಕಾದ ಆವಶ್ಯಕತೆ ತಪ್ಪಿರುತ್ತದೆಯಾಗಿ ಅಂತಾ ಕೆರೆಗಳಿಗೆ ಕಾಲ ಕಾಲಕ್ಕೆ ರಿಪೇರಿ ಮಾಡುವಂತಾ ವ ಅವುಗಳನ್ನ ವೊಳ್ಳೇ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಳ್ಳುವಂತಾ ಜವಾಬ್ ದಾರಿಯನ್ನ ಖಂಡಿತವಾಗಿ ಜಾರಿಯಲ್ಲಿ ತರಲ್ಪಡತಕ್ಕದ್ದು. ಪೊಂದು ವೇಳೆ ಅವರುಗಳು ತಮ್ಮ ತಮ್ಮ ಕೆರೆಗಳನ್ನ ವೊಳ್ಳೇ ಸ್ಥಿತಿಯಲ್ಲಿ ಯಿಟ್ಟುಕೊಳ್ಳುವದಕ್ಕಾಗಲಿ ಆವಶ್ಯಕವಾದ ಕಾಮಗಾರಿಗಳನ್ನ ಸಕಾಲದಲ್ಲಿ ಸಂಪೂರ್ಣವಾದ ಶ್ರದ್ಧೆ ದಿಂದಲೂ ವ ಬಂದೋಬಸ್ತಾಗಿಯೂ ನಡಿಸಲಿಕ್ಕಾಗಲಿ ತಪ್ಪಿದರೆ, ಅಂತಾ ಕಾಮಗಾರೀ ವಗ್ಗೆರೇ ಕೆಲಸವನ್ನ ಗವರ್ಮೆಂಟಿನವರೇ ತೆಗದುಕೊಂಡು ಖುದ್ದು ನಡಿಸಲು ನ್ಯಾಯ್ಯವಾಗಿರತಕ್ಕದ್ದು. ಆ ಬಾಬತು ಲಾಗವಡು ಕಂದಾಯದ ಬಾಕೀಯಂತೆಯೇ ಅವರುಗಳಿಂದ ವಸೂಲ್ ಮಾಡಲ್ಪಡತಕ್ಕದ್ದು.

4. ಈ ತಿದ್ದುಪಾಟುಗಳು ಸರ್ವರ ತಿಳುವಳಿಕೆ ಬಗ್ಯೆ ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಲ್ಪಡತಕ್ಕದ್ದು.

5. ಇನಾಂ ಗ್ರಾಮಗಳಲ್ಲಿರುವ ತರೀ ಜಮ್ರ್ಗಾ ಮೇಲೆ ವಸೂಲಾಗುವ ನೀರು ಸರದಿಯನ್ನ ನಿಲ್ಲಿಸಿ ಯಿಡತಕ್ಕ ಬಗ್ಯೆ, 1881ನೇ ಇಸವಿ ಡಿಶಂಬರ್ 17ನೇ ಮಕ್ಕಂ 7416—225ನೇ ನಂಬರ್‌ವುಳ್ಳ ಪ್ರೊಸಿಡಿಂಗ್ಸ್‌ನಲ್ಲಿ ಕಂಡ ಹುಕ್ಕುಂ ಯಿದರ ದೆಸೆಯಿಂದ ರದ್ದು ಪಡಿಸಿರುತ್ತೆ. ಸರಕಾರದ ಜಲಾಧಾರ ವಿಲ್ಲದೇ ಯಿರುವ ತರೀ ಇನಾಂತಿ ಜಮ್ರ್ಗಳ ಬಾಬತು ಒದತಕ್ಕ ಬಾಕೀಯಂತೆ ಲಿಖ್ತದಲ್ಲಿ ನಮೂದಾಗಿರುವ ಮೊಬಲಗು, ಈಗ ಮಂಜೂರ್ಮಾಡಿರುವ ರೂಲ್ಸ್ ಅನುಸರಿಸಿ ವಜಾ ಮಾಡಲ್ಪಡತಕ್ಕದ್ದು, ಹಾಗೆ ವಜಾ ಮಾಡಲ್ಪಟ್ಟ ಮೊಬಲಗುಗಳು ಈ ಆಫೀಸಿಗೆ ಕ್ರಮವಾಗಿ ತಿಳಿಯಲ್ಪಡಿಸತಕ್ಕದ್ದು. ಈ ಬಾಬಿನಲ್ಲಿ ಮಿಕ್ಕಾದ ಸಂಗತಿಯೊಳಗೆ ಯಿರುವ ಬಾಕೀಗಳನ್ನ ವಸೂಲ್ ಮಾಡಲಿಕ್ಕೆ ಕೂಡ್ಲೆ ತರದೂದು ನಡಿಸಲ್ಪಡತಕ್ಕದ್ದು.

6. ಸದರೀ ಪರಿಷ್ಕರಿಸಲ್ಪಟ್ಟ ಸರ್ವೇ ಕೌಲಿನ 18ನೇ ಕಲಮನುಸರಿಸಿ ಯಿರಿಗೇಷನ್ ಸೆಸ್ಸ್ ಯಾ ಅವರ ಸಮಾನ ಮೊಬಲಗನ್ನ ವಸೂಲ್ ಮಾಡುವದರಲ್ಲಿ ಯಾವ ಇನಾಂತಿ ತರೀ ಜಮೀನುಗಳನ್ನ ವಿನಾಯಿಸತಕ್ಕದ್ದೋ ಆ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರುಗಳು ರೆವಿನ್ಯೂ ಸರ್ವೇ ಸೂಪರ್‌ಟೆಂಡೆಂಟರಿಗೆ ಬರದು ವ್ಯವಸ್ಥೇ ಮಾಡಬೇಕೆಂದು ಅಪೇಕ್ಷಿಸಲ್ಪಟ್ಟರುತ್ತಾರೆ.

ಆರ್. ವಿಜಯೀಂದ್ರರಾವ್,
ಜೀಫ್ ಸೆಕ್ರೆಟೇರಿ.